**ಕರ್ನಾಟಕ ಸರ್ಕಾರ**

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಇಮೈಲ್: commissioner.pue@gmail.com ಫೋನ್:080-23561944 ಫ್ಯಾಕ್ಸ್: 23361852.

**ಜ್ಞಾಪನ**

ವಿಷಯ: ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ (ಎಸ್.ಡಿ.ಪಿ) ಹೆಚ್ಚುವರಿ ತರಗತಿ ಕೊಠಡಿ,ಪ್ರಯೋಗಾಲಯ, ಮತ್ತು ಶೌಚಾಲಯ ಇತ್ಯಾದಿಗಳನ್ನು ನಿರ್ಮಿಸುವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಕುರಿತು.

ಉಲ್ಲೇಖ:1. ಸರ್ಕಾರಿ ಆದೇಶ ಸಂಖ್ಯೆ ಇಡಿ:219 ಯೋಸಕ 2017 ದಿನಾಂಕ:9-2-2018.

2. ಪಿಯುಇ/ಕಟ್ಟಡ-03/ಯೋಜನೆ-01/ಲೆ.ಶಿ.133/2017-18 ದಿನಾಂಕ:12-2-2018.

ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ 2017-18 ನೇ ಸಾಲಿಗೆ ರಾಜ್ಯದಲ್ಲಿರುವ 6 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ (ಎಸ್.ಡಿ.ಪಿ) ಹೆಚ್ಚುವರಿ ತರಗತಿ ಕೊಠಡಿ,ಪ್ರಯೋಗಾಲಯ, ಮತ್ತು ಶೌಚಾಲಯ ಇತ್ಯಾದಿಗಳನ್ನು ನಿರ್ಮಿಸಲು ಸರ್ಕಾರವು ಅನುಮತಿ ನೀಡಿ ಸದರಿ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 4202-01-202-1-05-133 ಯೋಜನೆಯಡಿಯಲ್ಲಿ ಒದಗಿಸಿರುವ ಅನುದಾನ ಮಿತಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅನುಮೋದನೆ ನೀಡಲಾಗಿದೆ.

ಹಾಗೂ ಸದರಿ ಕಾಮಗಾರಿಗಳನ್ನು ಠೇವಣಿ ವಂತಿಕೆ ಕಾಮಗಾರಿಗಳೆಂದು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮುಖಾಂತರ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿದೆ.

ಉಲ್ಲೇಖ (2)ರ ಈ ಕಛೇರಿ ಪತ್ರದಲ್ಲಿ ಸದರಿ ಅನುಮೋದಿತ 6 ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಲು ಕೋರಿ ಹಾಗು ಸದರಿ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಸಬೇಕಾಗಿರುವುದರಿಂದ ಆದಷ್ಟು ಬೇಗನೇ ಅಂದರೆ 20-2-2018ರ ಒಳಗಾಗಿ ಅಂದಾಜು ಪಟ್ಟಿಗೆ ಅನುಮೋದನೆ ಪಡೆಯುವಂತೆ ಕೋರಲಾಗಿತ್ತು. ಆದರೆ ಅಂದಾಜು ಪಟ್ಟಿ ಸಲ್ಲಿಕೆ ವಿಳಂಬವಾಗುತ್ತಿದ್ದು, ಸದರಿ ಅನುಬಂಧದಲ್ಲಿರುವ 6 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕಾಯ್ದಿರಿಸಿ ಪ್ರಸಕ್ತಸಾಲಿನ ಆರ್ಥಿಕ ವರ್ಷವು ಅಂತ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಮೂಲ ಸೌಕರ್ಯ ಒದಗಿಸಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವ ಉದ್ದೇಶದಿಂದ ಹಾಗೂ ಸದರಿ ಕಾಮಗಾರಿಗಳು ಠೇವಣಿ ವಂತಿಕೆ ಕಾಮಗಾರಿಗಳಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ: ಪಿಯುಇ/ಕಟ್ಟಡ-03/ಯೋಜನೆ-01/ಲೆ.ಶಿ.133/2017-18 ದಿನಾಂಕ:17-3-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ ಲೆಕ್ಕ ಶೀರ್ಷಿಕೆ 4202-01-202-1-05-133 ಯೋಜನೆಯಡಿಯಲ್ಲಿ ರೂ.600.00 ಲಕ್ಷ (ಆರು ನೂರು ಲಕ್ಷಗಳು ಮಾತ್ರ) ಗಳ ಅನುಬಂಧದಲ್ಲಿನ 6 ಅನುಮೋದಿತ ಕಾಮಗಾರಿಗಳಿಗೆ ನಿಯಮಾನುಸಾರ ಆಯಾ ಜಿಲ್ಲೆಗಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಮೂಲಕ ನಿರ್ವಹಿಸಲು, ಅನುದಾನವನ್ನು ಬಳಕೆಮಾಡುವ ಮುನ್ನ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಬೇಕೆಂಬ ನಿಬಂಧನೆ ಹಾಗೂ ಈ ಕೆಳಕಂಡ ಷರತ್ತುಗಳನ್ನು ಪಾಲಿಸುವ ಮೇರೆಗೆ ರೂ.600.00

ಲಕ್ಷ ಅನುದಾನವನ್ನು ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಸದರಿ ಮೊತ್ತವನ್ನು ಅನುಬಂಧದಲ್ಲಿರುವಂತೆ ಜಿಲ್ಲಾಉಪನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗ್ಗಳಿಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಮೊತ್ತವನ್ನು ಅಪ್‌ಲೋಡ್ ಮಾಡಲು ಲೆಕ್ಕಪತ್ರಾಧಿಕಾರಿಗಳಿಗೆ ಸೂಚಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂದಿಸಿದ ಜಿಲ್ಲೆಗಳ ಉಪನಿರ್ದೇಶಕರುಗಳು. ಸ್ವೀಕೃತನ ರಶೀದಿಯ ಮೂಲಕ ಖಜಾನೆಯಿಂದ ಸೆಳೆದು ಸಂಬಂದಿಸಿದ ಜಿಲ್ಲೆಗಳ ವಿಭಾಗವಾರು ಕಾರ್ಯಪಾಲಕ ಅಭಿಯಂತರರು. ಜಿಲ್ಲಾ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಇವರುಗಳಿಗೆ ಪಾವತಿಸುವುದು. ಈ ರೀತಿಯಾಗಿ ಪಾವತಿಸಿರುವ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು. ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಇವರು ಲೆಕ್ಕಶೀರ್ಷಿಕೆ 8443-00-108-0-00 ಸಾರ್ವಜನಿಕ ಕಾಮಗಾರಿಗಳ ಠೇವಣಿ ಖಾತೆಗೆ ಜಮಾ ಮಾಡಿಕೊಂಡು ನಿಯಮಾನುಸಾರ ಕ್ರಮವಹಿಸುವುದು.

**ಷರತ್ತುಗಳು**

1. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಚಲಿತ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಮಗ್ರಹಣೆಗಳಲ್ಲಿ ಪಾರದರ್ಶಕ ಆಧ್ಯಾದೇಶ 1999ರ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯದೇ ಕಾಮಗಾರಿಗಳನ್ನು ಪ್ರಾರಂಬಿಸತಕ್ಕದಲ್ಲ. ಅನುದಾನವನ್ನು ಬಳಕೆ ಮಾಡುವ ಮುನ್ನ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯತಕ್ಕದ್ದು.
3. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತದ ಕುರಿತಂತೆ ಭವಿಷ್ಯದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳಿಗೂ ಬದ್ಧರಾಗಿರತ್ತಕ್ಕದ್ದು.
4. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತದ ಕುರಿತಂತೆ/ಕಾಮಗಾರಿಗಳ ಅನುಷ್ಠಾನದ ಸಂಬಂದ ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಡುವೆ ಏನೆ ವಿವಾದ/ಬಿನ್ನಾಭಿಪ್ರಾಯಗಳು ಉಂಟಾದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ತೆಗದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.
5. ಬಿಡುಗಡೆ ಮಾಡುತ್ತಿರುವ ಮೊತ್ತಕ್ಕೆ ಸೂಕ್ತ ಲೆಕ್ಕಪತ್ರಗಳನ್ನು ಇರಿಸತಕ್ಕದ್ದು.
6. ಎರಡು ಭಾರಿ ಹಣ ಪಾವತಿಯಾಗದಂತೆ ನೋಡಿಕೊಳ್ಳತಕ್ಕದ್ದು.
7. ಕಾಮಗಾರಿಯನ್ನು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಪೂರ್ಣಗೊಳಿಸಲು ಸೂಚಿಸಿದೆ. ಬಿಡುಗಡೆ ಮಾಡುತ್ತಿರುವ ಮೊತ್ತವು ಮೇಲಿನ ಕಾಮಗಾರಿಗಳಿಗೆ ಹೊರತುಪಡಿಸಿ ಬೇರೆ ಯಾವುದೇ ಕಾಮಗಾರಿಗೆ ಬಳಸಬಾರದು.
8. ಸರ್ಕಾರದ ಆದೇಶ ಸಂಖ್ಯೆ: ಇಡಿ 136 ಟಿಪಿಯು 1999. ದಿನಾಂಕ: 09-10—2006ರಲ್ಲಿ ನಿಗದಿಪಡಿಸಿರುವಂತೆ ಕೊಠಡಿಗಳ ಸುತ್ತಳತೆಯನ್ನು ಕಾಯ್ದುಕೊಳ್ಳತ್ತಕ್ಕದ್ದು.
9. ಕಾಮಗಾರಿಗಳನ್ನು ನಿಗದಿ ಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸಲು ಸೂಚಿಸಿದೆ.
10. ಯಾವುದೇ ರೀತಿಯ ಹೆಚ್ಚುವರಿ ವೆಚ್ಚಕ್ಕೆ ನಿರ್ಬಂಧ ವಿಧಿಸಿದೆ.

11. ಪ್ರತಿ ಕಾಮಗಾರಿಗೆ ರ್‍ಯಾಂಪ್ ನಿರ್ಮಾಣ ಹಾಗೂ ಕಾಮಗಾರಿಯ ಯೋಜನಾ ಫಲಕವನ್ನು ಕಡ್ಡಾಯವಾಗಿ ಅಳವಡಿಸುವುದು.
12. ಹಾಲಿ ಬಿಡುಗಡೆ ಮಾಡಿರುವ ಮೊತ್ತಕ್ಕೆ ಮೊದಲು ಪೂರ್ಣ ಪ್ರಮಾಣದ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು..
13. ಕಾಮಗಾರಿಯ ಪ್ರತಿ ಹಂತದ ಭೌತಿಕ ಮತ್ತು ಆರ್ಥಿಕ ಪ್ರಗತಿ ವಿವರಗಳನ್ನು ಕಾಲ್ಲಕಾಲಕ್ಕೆ ಸಲ್ಲಿಸುವುದು.
14. ಕಾಮಗಾರಿಗಳಿಗೆ ಅನುದಾನವನ್ನು 2017-18 ನೆ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ ನಿರ್ಮಿಸಿದೆ ಎಂದು ಶಾಶ್ವತ ನಾಮಫಲಕ ಅಳವಡಿಸುವುದು ಕಡ್ಡಾಯವಾಗಿರುತ್ತದೆ.
15. ಕಾಮಗಾರಿಯನ್ನು ಪ್ರಾರಂಭಿಸಿ ಮುಕ್ತಾಯಗೊಂಡ ನಂತರ ಉಪಯೋಗ್ಯತಾ ಇಲಾಖೆಗೆ ಹಸ್ತಾಂತರಿಸಿ ಕಾಮಗಾರಿ ಮುಕ್ತಾಯಗೊಂಡ ವರದಿಯನ್ನು ಸಲ್ಲಿಸತಕ್ಕದ್ದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಇವರಿಗೆ,

1. ಮುಖ್ಯ ಅಭಿಯಂತರರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ. ಗ್ರಾಮೀಣಾಭಿವೃದ್ಧಿ ಭವನ. ಆನಂದರಾವ್ ಸರ್ಕಲ್ ಬೆಂಗಳೂರು
2. ಸುಪರಿಟೆಂಡಿಂಗ್ ಇಂಜಿನಿಯರ್. ಪಂಚಾಯತ್ ರಾಜ್ ಇಂಜಿನಿಯರಿಂಗ್ಇಲಾಖೆ. ಬೆಂಗಳೂರುವೃತ್ತ. ಬೆಂಗಳೂರು.
3. ಕಾರ್ಯಪಾಲಕ ಅಭಿಯಂತರರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ. ಕೋಲಾರವಿಭಾಗ. ಕೋಲಾರಜಿಲ್ಲೆ.
4. ಕಾರ್ಯಪಾಲಕ ಅಭಿಯಂತರರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ.ಹಾಸನ ವಿಭಾಗ. ಹಾಸನಜಿಲ್ಲೆ.
5. ಕಾರ್ಯಪಾಲಕ ಅಭಿಯಂತರರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ.ಯಾದಗಿರಿ ವಿಭಾಗ. ಯಾದಗಿರಿಜಿಲ್ಲೆ.
6. ಕಾರ್ಯಪಾಲಕ ಅಭಿಯಂತರರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ. ಕೊಪ್ಪಳವಿಭಾಗ. ಕೊಪ್ಪಳಜಿಲ್ಲೆ.
7. ಕಾರ್ಯಪಾಲಕ ಅಭಿಯಂತರರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ.ಬಾಗಲಕೋಟೆ ವಿಭಾಗ. ಬಾಗಲಕೋಟೆ ಜಿಲ್ಲೆ.
8. ಕಾರ್ಯಪಾಲಕ ಅಭಿಯಂತರರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ. ಚಿತ್ರದುರ್ಗವಿಭಾಗ. ಚಿತ್ರದುರ್ಗಜಿಲ್ಲೆ.
9. ಉಪನಿರ್ದೇಶಕರು. ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ. ಖನಿಜ ಭವನ. ರೇಸ್ ಕೋರ್ಟ್ ರಸ್ತೆ. ಬೆಂಗಳೂರು
10. ಲೆಕ್ಕಪತ್ರ ಅಧಿಕಾರಿಗಳು ಲೆಕ್ಕಪತ್ರ ಶಾಖೆ. ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು.
11. ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರುಗಳಿಗೆ

**ಆದೇಶ ಸಂಖ್ಯೆ: ಪಿಯುಇ/ ಕಟ್ಟಡ-03/ಯೋಜನೆ-01/ಲೆ.ಶಿ.-133/2017-18ಕ್ಕೆ ಅನುಬಂಧ ದಿನಾಂಕ:16-03-2018**

| ಕ್ರಸಂ | ಜಿಲ್ಲಾ ಉಪನಿರ್ದೇಕರು | ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿವರ | ಕಾಲೇಜು ಸಂಕೇತ | ಕಾಮಗಾರಿ ವಿವರ | | | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಪಂಚಾಯತ್ ರಾಜ್ ಇಂಜನಿಯರ್ ವಿಭಾಗದ ಒಟ್ಟು ಅಂದಾಜು ಮೊತ್ತ | ಪಂಚಾಯತ್ ರಾಜ್ ಇಂಜನಿಯರ್ ವಿಭಾಗ | ಬಿಡುಗಡೆ ಮಾಡಲಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|---|---|---|---|---|---|---|
| | | | | ತರಗತಿ ಕೊಠಡಿ | ಪ್ರಯೋಗಾಲಯ | ಶೌಚಾಲಯ | | | | |
| 1. | ಜಿಲ್ಲಾ ಉಪನಿರ್ದೇಕರು. ಪದವಿ ಪೂರ್ವ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ | ಸೋಮಯಾಜಲಹಳ್ಳಿ, ಶ್ರೀನಿವಾಸಪುರ ತಾ. ಕೋಲಾರ ಜಿಲ್ಲೆ | MM142 | 03 | 02 | 02 | 100.00 | **100.00** | ಕೋಲಾರ | 100.00 |
| 2. | ಜಿಲ್ಲಾ ಉಪನಿರ್ದೇಕರು. ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾಸನ ಜಿಲ್ಲೆ | ಚಿಂದೇನಹಳ್ಳಿ, ಅರಸಿಕೆರೆ ತಾ. ಹಾಸನ ಜಿಲ್ಲೆ. | LL075 | 03 | 02 | 02 | 100.00 | **100.00** | ಚನ್ನರಾಯ ಪಟ್ಟಣ | 100.00 |
| 3. | ಜಿಲ್ಲಾ ಉಪನಿರ್ದೇಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಯಾದಗಿರಿ ಜಿಲ್ಲೆ | ಗಾಜರಕೋಟ, ಯಾದಗಿರಿ ತಾ. ಯಾದಗಿರಿ ಜಿಲ್ಲೆ. | KY 232 | 06 | 00 | 02 | 100.00 | **100.00** | ಯಾದಗಿರಿ | 100.00 |
| 4. | ಜಿಲ್ಲಾ ಉಪನಿರ್ದೇಕರು. ಪದವಿ ಪೂರ್ವ ಶಿಕ್ಷಣ ಇಲಾಖೆ, ಕೊಪ್ಪಳ ಜಿಲ್ಲೆ | ಮಂಗಳೂರು, ಯಲಬುರ್ಗ ತಾ, ಕೊಪ್ಪಳ ಜಿಲ್ಲೆ. | RK010 | 03 | 02 | 02 | 100.00 | **100.00** | ಕೊಪ್ಪಳ | 100.00 |
| 5. | ಜಿಲ್ಲಾ ಉಪನಿರ್ದೇಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಬಾಗಲಕೋಟೆ | ನೀರಬೂದಿಹಾಳ, ಬಾದಾಮಿ ತಾ. ಬಾಗಲಕೋಟೆ ಜಿಲ್ಲೆ. | EB120 | 03 | 02 | 02 | 100.00 | **100.00** | ಬಾಗಲಕೋಟೆ | 100.00 |
| 6. | ಜಿಲ್ಲಾ ಉಪನಿರ್ದೇಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಚಿತ್ರದುರ್ಗಜಿಲ್ಲೆ | ಹಿರಿಯೂರು.ಬಾಲಕರು. ಚಿತ್ರದುರ್ಗ ಜಿಲ್ಲೆ. | GG002 | 06 | 00 | 02 | 100.00 | **100.00** | ಚಿತ್ರದುರ್ಗ | 100.00 |
| | ಒಟ್ಟು ಮೊತ್ತ | | | | | | | | | |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ